3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು.

**Spl.C. No.539/2023**

ಪ್ರಾಸಾ 9

ಚಾಸಾ 18

| | |
|---|---|
| ಹೆಸರು | ಲಕ್ಷ್ಮೀಕಾಂತ್.ಆರ್ |
| ತಂದೆಯ ಹೆಸರು | ರಂಗಸ್ವಾಮಿ |
| ವಯಸ್ಸು | 46 ವರ್ಷ |
| ಉದ್ಯೋಗ | ಡಿವೈಎಸ್‌ಪಿ, ಸಿ.ಐ.ಡಿ., ಬೆಂಗಳೂರು |
| ವಾಸಸ್ಥಳ | ಬೆಂಗಳೂರು |

**ಸಾಕ್ಷಿಯನ್ನು ದಿನಾಂಕ 26.05.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.**

1) ಡಿಸೆಂಬರ್ 2022 ರಿಂದ ಫೆಬ್ರವರಿ 2024 ರವರೆಗೆ ನಾನು ಕುಣಿಗಲ್ ಉಪವಿಭಾಗದಲ್ಲಿ ನಾನು ಡಿವೈಎಸ್‌ಪಿ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2) ದಿನಾಂಕ 12.06.2023 ರಂದು ತುಮಕೂರಿನ ಪೊಲೀಸ್ ಅಧೀಕ್ಷಕರು ನನ್ನನ್ನು ಈ ಪ್ರಕರಣದ ತನಿಖಾಧಿಕಾರಿಯಾಗಿ ನೇಮಿಸಿ ಆದೇಶವನ್ನು ಮಾಡಿರುತ್ತಾರೆ. ಸದರಿ ಆದೇಶವನ್ನು ನಿಪಿ.13 ಎಂದು, ಸಾಕ್ಷಿಯ ಸಹಿಯನ್ನು ನಿಪಿ.13(ಎ) ಎಂದು ಗುರುತಿಸಲಾಯಿತು. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.17 ರವರಿಂದ ಪಡೆದುಕೊಂಡಿರುತ್ತೇನೆ. ದಿಃ 13.06.2023 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ.9 ಮತ್ತು 10 ರವರ ಸಮಕ್ಷಮ ಬೆಳಿಗ್ಗೆ 8.15 ರಿಂದ 9.15 ರವರೆಗೆ ಚಾಸಾ.1 ರವರು ತೋರಿಸಿದಲ್ಲಿ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಮಾಡಿಕೊಂಡಿರುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು.

ಪಂಚನಾಮೆಯ ಕಾಲದಲ್ಲಿ ಭಾವಚಿತ್ರವನ್ನು ತೆಗೆಸಿರುತ್ತೇನೆ. ಅದನ್ನು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿದೆ. ಪಂಚನಾಮೆ ಕಾಲದಲ್ಲಿ ಚಾಸಾ.1 ರವರು ಹಾಜರುಪಡಿಸಿದ ಒಂದು ಕೀ ಬಂಚ್ ಮತ್ತು ಒಂದು ನೀಲಗಿರಿ ದೊಣ್ಣೆಯನ್ನು ವಶಕ್ಕೆ ತೆಗೆದುಕೊಂಡಿರುತ್ತೇನೆ. ಅವುಗಳನ್ನು ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ. ಪಂಚನಾಮೆಗೆ ಸಹಕರಿಸುವಂತೆ ಪಂಚರಿಗೆ ನೋಟೀಸನ್ನು ನೀಡಿರುತ್ತೇನೆ. ಅದನ್ನು ಈಗಾಗಲೇ ನಿಪಿ.7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.7(ಬಿ) ಎಂದು ಗುರುತಿಸಲಾಯಿತು.

3) ಅದೇ ದಿನ ಚಾಸಾ.17 ರವರು 1 ನೇ ಆರೋಪಿಯನ್ನು ವಶಕ್ಕೆ ತೆಗೆದುಕೊಂಡು ನನ್ನ ಮುಂದು ಹಾಜರುಪಡಿಸಿ ವರದಿಯನ್ನು ನೀಡಿರುತ್ತಾರೆ. ವರದಿಯನ್ನು ನಿಪಿ.14 ಎಂದು, ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು. ನಂತರ ದಸ್ತಗಿರಿ ನಿಯಮಾವಳಿಗಳನ್ನು ಪಾಲನೆ ಮಾಡಿ 1 ನೇ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕಾಗಿ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಗುರುತಿಸುತ್ತೇನೆ.

4) ಅದೇ ದಿನ ಚಾಸಾ.1 ರವರ ಮುಂದುವರಿದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಹಾಗೂ ಚಾಸಾ.9 ರವರ ಹೇಳಿಕೆಯನ್ನು ಸಹ ಪಡೆದುಕೊಂಡಿರುತ್ತೇನೆ. ದಿಃ15.06.2023 ರಂದು ಚಾಸಾ.2 ಮತ್ತು 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

5) ದಿಃ16.06.2023 ರಂದು ಚಾಸಾ.11 ರವರಿಂದ ಚಾಸಾ.1 ರವರ ಗಾ.ಪ್ರ.ಪತ್ರವನ್ನು ಪಡೆದುಕೊಂಡಿರುತ್ತೇನೆ. ಗಾ.ಪ್ರ.ಪತ್ರವನ್ನು ಈಗಾಗಲೇ ನಿಪಿ.11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.11(ಬಿ) ಎಂದು ಗುರುತಿಸಲಾಯಿತು. ದಿಃ24.06.2023 ರಂದು ಚಾಸಾ.12 ರವರಿಂದ ಕೃತ್ಯ ನಡೆದ

ಸ್ಥಳದ ಬಗ್ಗೆ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ಈಗಾಗಲೇ ನಿಪಿ.9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ದಿಃ07.07.2023 ರಂದು 2 ನೇ ಆರೋಪಿಯು ಮಾನ್ಯ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡು ಬಂದು ನನ್ನ ಮುಂದೆ ಹಾಜರಾಗಿರುತ್ತಾರೆ. ಅವರಿಂದ ಸೂಕ್ತ ಜಾಮೀನನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ಗುರುತಿಸುತ್ತೇನೆ.

6) ಅದೇ ದಿನ ರಂದು ಚಾಸಾ.15 ರವರಿಂದ ಆರೋಪಿತರ ಮತ್ತು ಚಾಸಾ.1 ರವರ ಜಾತಿ ಪ್ರಮಾಣ ಪತ್ರವನ್ನು ನಿಪಿ.8 ರಂತೆ ಪಡೆದುಕೊಂಡಿರುತ್ತೇನೆ. ನಿಪಿ.8 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ದಿಃ 15.07.2023 ರಂದು ಚಾಸಾ.6 ಮತ್ತು 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ18.07.2023 ರಂದು ಚಾಸಾ.4 ವ. 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

7) ದಿಃ 20.07.2023 ರಂದು ಚಾಸಾ.8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 20.07.2023 ರಂದು ಚಾಸಾ.13 ರವರಿಂದ ಕೃತ್ಯ ನಡೆದ ಸಂದರ್ಭದಲ್ಲಿ ವಿದ್ಯುತ್ ಸರಬರಾಜು ಇತ್ತು ಮತ್ತು ಸ್ಥಳದಲ್ಲಿ ವಿದ್ಯುತ್ ಕಂಬದಲ್ಲಿ ಬೀದಿ ದೀಪ ಇತ್ತು ಎಂದು ವರದಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ನಿಪಿ.15 ಎಂದು, ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಯಿತು.

7) ದಿಃ 27.07.2023 ರಂದು ಚಾಸಾ.14 ರವರಿಂದ ನಿಪಿ.10 ರಂತೆ ಸ್ಥಳದ ನಕ್ಷೆಯನ್ನು ಪಡೆದುಕೊಂಡಿರುತ್ತೇನೆ. ಪಂಚನಾಮೆಯ ಕಾಲದಲ್ಲಿ ಮತ್ತು ಸಾಕ್ಷಿ ವಿಚಾರಣೆ ಕಾಲದಲ್ಲಿ ತೆಗೆದಿದ್ದ ಭಾವಚಿತ್ರಗಳು ಮತ್ತು ಆಡಿಯೇ ವೀಡಿಯೋ ಹೇಳಿಕೆಗಳನ್ನು ಸಿಡಿಗೆ ವರ್ಗಾಯಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಿಡಿ ಯನ್ನು ನಿಪಿ.16 ಎಂದು

ಗುರುತಿಸಲಾಯಿತು. ಸದರಿ ಸಿಡಿಗೆ ಸಂಬಂಧಿಸಿದಂತೆ ಭಾ.ಸಾ.ಅ.ಕಲಂ.65 ಬಿ ರಡಿಯಲ್ಲಿ ಪ್ರಮಾಣಪತ್ರವನ್ನು ತಯಾರಿಸಿ ಕಡತಕ್ಕೆ ಅಳವಡಿಸಿಕೂಂಡಿರುತ್ತೇನೆ. ಅದನ್ನು ನಿಪಿ.17 ಎಂದು, ಸಾಕ್ಷಿಯ ಸಹಿಯನ್ನು ನಿಪಿ.17(ಎ) ಎಂದು ಗುರುತಿಸಲಾಯಿತು. ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ದ ದೋ.ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ.ಪಿ.ಎಂ. ವಕೀಲರಿಂದ :**

8) ಚಾಸಾ.1 ರವರು 2 ನೇ ಆರೋಪಿಯ ಒಡವೆಗಳನ್ನು ಅಡ ಇಟ್ಟಿದ್ದ ಬಗ್ಗೆ ರಸೀದಿ ಮತ್ತು ಆಧಾರ್ ಕಾರ್ಡನ್ನು ಚಾಸಾ.7 ರವರಿಂದ ಪಡೆದುಕೊಂಡಿದ್ದೀರಾ ಎಂದರೆ ರಸೀದಿಯನ್ನು ಪಡೆದುಕೊಂಡಿರುವುದಾಗಿ ನುಡಿಯುತ್ತಾರೆ. ಚಾಸಾ.1 ರವರು 2 ನೇ ಆರೋಪಿಯ ಒಡವೆಗಳನ್ನು ಮಾರಾಟ ಮಾಡಿಕೊಂಡಿದ್ದರಿಂದ ನಾನು ಅವುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ.2 ರವರ ಅಂಗಡಿಯಲ್ಲಿ ಬಾಡಿಗೆದಾರರಾಗಿದ್ದು ಅಂಗಡಿಯನ್ನು ಖಾಲಿ ಮಾಡುವ ವಿಚಾರದಲ್ಲಿ ಅವರಿಬ್ಬರ ನಡುವೆ ಗಲಾಟೆಯಾಗಿತ್ತು ಎಂದರೆ ಸರಿಯಲ್ಲ. ಚಾಸಾ.1 ರವರು 2 ನೇ ಆರೋಪಿಯ ಒಡವೆಗಳನ್ನು ಮಾರಾಟ ಮಾಡಿಕೊಂಡು ಆರೋಪಿತರ ವಿರುದ್ದ ಸುಳ್ಳು ದೂರು ಕೊಟ್ಟಿರುತ್ತಾರೆ ಎಂದು ನನ್ನ ತನಿಖಾ ಕಾಲದಲ್ಲಿ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

9) ಚಾಸಾ.2 ರಿಂದ 7 ರವರು ಯಾರೂ ಸಹ ಕಣ್ಣಾರೆ ಕಂಡ ಸಾಕ್ಷಿದಾರರಲ್ಲ ಮತ್ತು ಅವರೆಲ್ಲಾ interested witness ಎಂದರೆ ಸರಿಯಲ್ಲ. ಆರೋಪಿತರು ಮಂಡ್ಯ ಜಿಲ್ಲೆಯವರಾಗಿದ್ದು ಚಾಸಾ.1 ರಿಂದ 7 ರವರು ಸ್ಥಳೀಯರಾಗಿರುವುದರಿಂದ ಅವರ ವಿರುದ್ದ ಸುಳ್ಳು ದೂರನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ.1 ರವರಿಗೆ ಒಡವೆಗಳನ್ನು ವಾಪಸ್ ಕೊಡುವಂತೆ ಕೇಳಿದ್ದರಿಂದ ಸುಳ್ಳು ದೂರನ್ನು ನೀಡಿರುತ್ತಾರೆಂದು ನನ್ನ ತನಿಖಾ ಕಾಲದಲ್ಲಿ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

ನಾನು ಯಾವುದೇ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಮತ್ತು ಪಂಚನಾಮೆಯನ್ನು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಮು.ಮಾ.1 ಮತ್ತು 2 ನ್ನು ವಶಕ್ಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ.11 ರವರು ನನ್ನ ನಿರ್ದೇಶನದ ಮೇರೆಗೆ ಸುಳ್ಳು ಗಾ.ಪ್ರ.ಪತ್ರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ನಾನು ಸುಳ್ಳು ದೋ.ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ